ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

**ಸಂಖ್ಯೆ: ಸಿ4[6] ಸಾ.ಸ್ಥ.ದೂ.ನಿ–01/2013–14** **ದಿನಾಂಕ: 05–11–2013**

**ಸುತ್ತೋಲೆ**

ವಿಷಯ: ತಂಬಾಕು ಉತ್ಪನ್ನಗಳಿಂದಾಗುವ ದುಷ್ಪರಿಣಾಮಗಳ ಕುರಿತು ಮಕ್ಕಳು ಮತ್ತು ಶಿಕ್ಷಕರಿಗೆ ಅರಿವು/ಜಾಗೃತಿ ಮೂಡಿಸುವ ರಾಜ್ಯಮಟ್ಟದ ಕಾರ್ಯಕ್ರಮ ಆಯೋಜಿಸಿರುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಬೆಂಗಳೂರು ಇವರ ಪತ್ರ, ದಿನಾಂಕ: 30.08.2013.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಮಕ್ಕಳು ತಂಬಾಕು ಉತ್ಪನ್ನಗಳ ಪ್ರಚಾರದ ಆಕರ್ಷಣೆಗೆ ಒಳಗಾಗುವುದರೊಂದಿಗೆ ಅದನ್ನು ಚಟವಾಗಿ ರೂಢಿಸಿಕೊಳ್ಳುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ರವರು ತಂಬಾಕು ಉತ್ಪನ್ನಗಳಿಂದಾಗುವ ದುಷ್ಪರಿಣಾಮಗಳ ಕುರಿತು ಮಕ್ಕಳು ಮತ್ತು ಶಿಕ್ಷಕರಿಗೆ ಅರಿವು/ಜಾಗೃತಿ ಮೂಡಿಸುವ ರಾಜ್ಯಮಟ್ಟದ ಕಾರ್ಯಕ್ರಮ ಆಯೋಜಿಸಿದ್ದು, "Hence to raise awareness among students and teachers we request you to consider having a state level pledge programme in every signle educational institute of Karnataka, all children and teachers can take a pledge to be tobacco free in their respective schools at the same time throughout Karnataka ಎಂದು ತಿಳಿಸಿರುತ್ತಾರೆ.

<u>ಕರ್ನಾಟಕದಲ್ಲಿ ಅಮೂಲ್ಯ ಜೀವಗಳನ್ನು ಉಳಿಸಲು ಪ್ರತಿಜ್ಞೆ</u>

**ಕರ್ನಾಟಕ ರಾಜ್ಯದ ಒಬ್ಬ ಜವಾಬ್ದಾರಿಯುತ ನಾಗರೀಕನಾಗಿ ನಾನು ಕರ್ನಾಟಕದಲ್ಲಿ ತಂಬಾಕು ಬಳಕೆ ನಿಯಂತ್ರಣಕ್ಕೆ ಬದ್ಧತೆಯಿಂದ ಬೆಂಬಲಿಸುತ್ತೇನೆ.**

**ಈ ಕುರಿತ ವಿಷಯಗಳಲ್ಲಿ ನಾನು ಧ್ವನಿ ಎತ್ತುತ್ತೇನೆ ಮತ್ತು ಕರ್ನಾಟಕದಲ್ಲಿ ಆ ಕುರಿತ ಎಲ್ಲಾ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತೇನೆ.**

**<u>ಕರ್ನಾಟಕದಲ್ಲಿ ಈ ಕೆಲಸ ಆಗಬೇಕು ಎಂದು ವಾಗ್ದಾನ ನೀಡುತ್ತೇನೆ.</u>**

- **ಎಲ್ಲಾ ಶಿಕ್ಷಣ ಸಂಸ್ಥೆಗಳು ತಂಬಾಕು ರಹಿತವಾಗಬೇಕು.**
- **ಅಪ್ರಾಪ್ತರಿಗೆ ಅಥವ ಅವರಿಂದ ತಂಬಾಕು ಮಾರಾಟ ಮಾಡಬಾರದು.**
- **ಶಾಲಾ–ಕಾಲೇಜುಗಳ ಸುತ್ತ 100 ಗಜ ವ್ಯಾಪ್ತಿಯಲ್ಲಿ ತಂಬಾಕು ಮಾರಾಟ ನಿಷಿದ್ಧ.**

ಇದು ರಾಜ್ಯಮಟ್ಟದ ಕಾರ್ಯಕ್ರಮವಾಗಿದ್ದು ದಿನಾಂಕ:30.11.2013 ರಂದು ರಾಜ್ಯದಾದ್ಯಂತ ಎಲ್ಲಾ ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ಮೇಲ್ಕಂಡಂತೆ ಪ್ರತಿಜ್ಞೆ ಸ್ವಿಕರಿಸುವ ಬಗ್ಗೆ ಅಗತ್ಯ ಕ್ರಮವಹಿಸಲು ತಿಳಿಸಿದೆ.

ಆಯುಕ್ತರು

ಇವರಿಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.